# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ 1174 (1449)

ಸದಸ್ಯರ ಹೆಸರು ಶ್ರೀ ಚಿದಾನಂದ್ ಎಂ ಗೌಡ (ಪದವೀಧರರ ಕ್ಷೇತ್ರ)

ಉತ್ತರಿಸಬೇಕಾದ ದಿನಾಂಕ 16.03.2026

ಉತ್ತರಿಸುವವರು ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಅರಣ್ಯ ಕೃಷಿ ಪ್ರೋತ್ಸಾಹಿಸಲು ಸರ್ಕಾರ ರೈತರಿಗೆ ನೀಡುವ ಸಹಾಯವೇನು; | ರಾಜ್ಯದಲ್ಲಿ ಅರಣ್ಯ ಕೃಷಿ ಪ್ರೋತ್ಸಾಹಿಸಲು ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆ(KAPY)ಯಡಿ ರೈತರಿಗೆ ಸಸಿಗಳನ್ನು ರಿಯಾಯಿತಿ ದರದಲ್ಲಿ ವಿತರಿಸಿ, ಮೂರು ವರ್ಷಗಳವರೆಗೆ ಬದುಕುಳಿದ ಸಸಿಗಳಿಗೆ ಪ್ರೋತ್ಸಾಹ ಧನ ವಿತರಿಸಲಾಗುತ್ತಿದೆ. |
| ಆ) | ಯಾವ ವಿಧದ ಮರಗಳನ್ನು ಅರಣ್ಯ ಕೃಷಿಗೆ ಉಚಿತವಾಗಿ ನೀಡಲಾಗುವುದು; ಸದರಿ ಮರಗಳ ಪೋಷಣೆಗೆ ಸರ್ಕಾರ ನೀಡುವ ಪ್ರೋತ್ಸಾಹ ಧನವೇಷ್ಟು; ಸದರಿ ಮರಗಳನ್ನು ಎಷ್ಟು ವರ್ಷಗಳ ನಂತರ ಕಟಾವು ಮಾಡಬಹುದು; | • ರಾಜ್ಯ ಸರ್ಕಾರದ ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯ ಮಾರ್ಗಸೂಚಿಗಳಂತೆ ನೀಲಗಿರಿ, ಅಕೇಶೀಯಾ, ಸಿಲ್ವರ್ ಓಕ್, ರಬ್ಬರ್, ಸುಬಾಬುಲ್, ತೆಂಗು, ಅಡಿಕೆ ಮುಂತಾದವುಗಳನ್ನು ಹೊರತುಪಡಿಸಿ ಸಾಗವಾನಿ, ಬಿದಿರು, ಹೊಂಗೆ, ಬೇವು, ಹೆಬ್ಬೇವು, ಮಾವು ನೇರಳೆ, ಶ್ರೀಗಂಧ, ರಕ್ತ ಚಂದನ ಇಂತಹ ಹಲವಾರು ಸಸಿಗಳನ್ನು ರಿಯಾಯ್ತಿ ದರಗಳಲ್ಲಿ ರೈತರಿಗೆ ವಿತರಿಸಲಾಗುತ್ತಿದೆ. ಅಲ್ಲದೇ ಬೇರೆ ಯೋಜನೆಗಳಲ್ಲಿ ಬೆಳೆಸಿರುವ ಇನ್ನು ಕೆಲವು ಇತರ ಜಾತಿಯ ಸಸಿಗಳನ್ನೂ ಸಹ ರಿಯಾಯಿತಿ ದರದಲ್ಲಿ ಇಲಾಖೆಯಿಂದ ಖರೀದಿಸಲು ಸಾರ್ವಜನಿಕರಿಗೆ ಅವಕಾಶವಿರುತ್ತವೆ.<br>• ಕೃಷಿ ಅರಣ್ಯ ಪ್ರೋತ್ಸಾಹ ಯೋಜನೆಯಡಿ ಬೆಳಸಲಾದ ಸಸಿಗಳನ್ನು ಇಲಾಖೆಯಿಂದ ಖರೀದಿಸಿ ತಮ್ಮ ಸ್ವಂತ ಜಮೀನಿನಲ್ಲಿ ನೆಟ್ಟು ಬೆಳೆಸಿ, ಬದುಕುಳಿದ ಸಸಿಗಳಿಗೆ ಪ್ರೋತಾಹ ಧನ ನೀಡಲಾಗುತ್ತಿದೆ. ವಿವರ ಈ ಕೆಳಗಿನಂತಿದೆ.<br>  • 1ನೇ ವರ್ಷದ ನಂತರ ಬದುಕುಳಿದ ಸಸಿಗಳಿಗೆ ರೂ. 35/-,<br>  • 2ನೇ ವರ್ಷದ ನಂತರ ಬದುಕುಳಿದ ಸಸಿಗಳಿಗೆ ರೂ. 40/-, ಮತ್ತು<br>  • 3ನೇ ವರ್ಷದ ನಂತರ ಬದುಕುಳಿದ ಸಸಿಗಳಿಗೆ ರೂ. 50/- ಗಳು<br>  ಈ ರೀತಿ ಮೂರು ವರ್ಷದವರೆಗೆ ಬದುಕುಳಿದ ಸಸಿಗಳಿಗೆ ಒಟ್ಟು ರೂ. 125/- ಗಳನ್ನು ಅರ್ಹ ರೈತರ ಉಳಿತಾಯ ಖಾತೆಗೆ ನೇರವಾಗಿ ಜಮ ಮಾಡಲಾಗುತ್ತಿದೆ.<br>• ರೈತರು ನೆಟ್ಟಿರುವ ಮರಗಳು ಕಟಾವು ಮಾಡಬಹುದಾದ ಅವಧಿಯು ಈ ಕೆಳಗಿನಂತೆ ವಿವಿದ ಅಂಶಗಳ ಆಧಾರದ ಮೇಲೆ ಅವಲಂಬಿತವಾಗಿದ್ದು, ಬೇರ-ಬೇರೆ ಅವಧಿಯಲ್ಲಿ ಕಟಾವಿಗೆ ಬರುತ್ತವೆ.<br>  • ಮರದ ಜಾತಿ/ವಿಧ;<br>  • ಆಯಾ ಪ್ರದೇಶದ ಭೌಗೋಳಿಕ ರಚನೆ ಮತ್ತು ವಾತಾವರಣ;<br>  • ಆಯಾ ಪ್ರದೇಶದಲ್ಲಿ ಬೀಳುವ ಮಳೆಯ ಪ್ರಮಾಣ; |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| | | • ಆಯಾ ಪ್ರದೇಶದಲ್ಲಿನ ಮಣ್ಣಿನ ರಚನೆ;<br>• ಕತ್ತಾವಣೆಯ ಉದ್ದೇಶ (ನಾಟಾ/ ಉರುವಲು/ ಕೋಲು/ ಕಡ್ಡಿ, ಮುಂತಾದವು). |
| ಇ) | ಕಡಿಮೆ ಅವಧಿಗೆ ಕಟಾವಿಗೆ ಬರುವ ಮತ್ತು ಕಡಿಮೆ ಆರೈಕೆ ಬೇಡುವ ಮರಗಳು ಯಾವುವು; | ಕೃಷಿ ಭೂಮಿಗಳಲ್ಲಿ ನೀಲಗಿರಿ, ಅಕೇಶಿಯಾ, ಸಿಲ್ವರ್ ಓಕ್, ಕ್ಯಾಸುರೀನಾ (ಗಾಳಿಮರ), ಗೊಬ್ಬರ ಗಿಡ (ಗ್ಲಿರಿಸೀಡಿಯಾ), ಸುಬಾಬುಲ್, ಹೆಬ್ಬೇವು ಮುಂತಾದ ಜಾತಿಯ ಮರಗಳು ಹಾಗೂ ವಿವಿಧ ಜಾತಿಯ ಬಿದಿರುಗಳು ಕಡಿಮೆ ಅವಧಿಗೆ ಕಟಾವಿಗೆ ಬರುವ ಮತ್ತು ಕಡಿಮೆ ಆರೈಕೆ ಬೇಡುವ ಮರಗಳಾಗಿರುತ್ತವೆ. |
| ಈ) | ಸದರಿ ಮರಗಳ ಕಟಾವಿಗೆ ಇರುವ ನಿಯಮವೇನು; ಮರ ಕಡಿಯಲು ರೈತರಿಗೆ ಅನುಮತಿಯನ್ನು ನೀಡಲು ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿದೆ; | • ರೈತರ ಭೂಮಿಗಳಲ್ಲಿ ಬೆಳೆಸಿರುವ ವಿವಿಧ ಜಾತಿಯ ಮರಗಳ ಕತ್ತಾವಣೆಗಾಗಿ (ಶ್ರೀಗಂಧ ಮತ್ತು ಬೀಟೆ ಮರಗಳನ್ನು ಹೊರತುಪಡಿಸಿ) ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮ, 1976ರ ಕಲಂ 8ರಲ್ಲಿ ಸಂಬಂಧಿಸಿದ ವೃಕ್ಷಾಧಿಕಾರಿ(Tree Officer)ಗಳಿಂದ ಅನುಮತಿ ಪಡೆಯಬೇಕಿರುತ್ತದೆ.<br>• ಪ್ರಸ್ತುತ 26 ವಿವಿಧ ಜಾತಿಯ ಮರಗಳ [ಉಪ ಪ್ರಶ್ನೆ (ಇ) ರಲ್ಲಿ ನಮೂದಿಸಿರುವ ಜಾತಿಯ ಮರಗಳನ್ನು ಸೇರಿದಂತೆ] ಕತ್ತಾವಣೆ ಮಾಡಲು ಸದರಿ ಕಾಯ್ದೆಯ ಕಲಂ 8 ರಿಂದ ಈಗಾಗಲೇ ವಿನಾಯಿತಿ ನೀಡಲಾಗಿರುತ್ತದೆ.<br>• ಪ್ರಸ್ತುತ 52 ವಿವಿಧ ಜಾತಿಯ ಮರಗಳನ್ನು ಸಾಗಾಣಿಕೆ ಮಾಡಲು ಇದರ ಜೊತೆಗೆ ಕರ್ನಾಟಕ ಅರಣ್ಯ ನಿಯಮಾವಳಿ, 1969ರಲ್ಲಿ ವಿನಾಯಿತಿ ನೀಡಲಾಗಿರುತ್ತದೆ.<br>• ರೈತರ ಜಮೀನುಗಳಲ್ಲಿ ಮರಗಳ ಕತ್ತಾವಣೆ ಪ್ರಕ್ರಿಯೆಯನ್ನು ಸರಳೀಕರಣಗೊಳಿಸಲು (i)ಕರ್ನಾಟಕ ಅರಣ್ಯ ಕಾಯ್ದೆ, 1963, (ii) ಕರ್ನಾಟಕ ಅರಣ್ಯ ನಿಯಮಾವಳಿ, 1969ರ ಮತ್ತು (iii) ಕರ್ನಾಟಕ ಮರಗಳ ಸಂರಕ್ಷಣಾ ಅಧಿನಿಯಮ, 1976ರ ವಿಧಾನಗಳಲ್ಲಿ ಅಗತ್ಯತೆಗೆ ಅನುಗುಣವಾಗಿ ಕಾಲಕಾಲಕ್ಕೆ ಪರಿಷ್ಕರಣೆ ಮಾಡಲಾಗಿರುತ್ತದೆ. ಅಲ್ಲದೇ ಸದರಿ ಕಾಯ್ದೆ / ನಿಯಮಗಳನ್ನು ಅರಣ್ಯ ಇಲಾಖೆಯಲ್ಲಿ ನಿರಂತರವಾಗಿ ಪರಿಶೀಲಿಸಿ, ಪರಿಸ್ಥಿತಿಗಳಿಗೆ ಅನುಗುಣವಾಗಿ ಹಾಗೂ ಸೂಕ್ತತೆಯಂತೆ ಪರಿಷ್ಕರಣೆ ಮೂಲಕ ರೈತರಿಗೆ ಅನುಕೂಲ ಆಗುವ ದೃಷ್ಟಿಯಿಂದ ನಿಯಮಗಳ ಸರಳೀಕರಣ ಪ್ರಕ್ರಿಯೆಯನ್ನು ಮುಂದಿನ ದಿನಗಳಲ್ಲಿಯೂ ಸಹ ಮುಂದುವರೆಸಲಾಗುತ್ತದೆ. |
| ಉ) | ಅರಣ್ಯ ಕೃಷಿಯಲ್ಲಿ ಬೆಳೆದ ಮರಗಳನ್ನು ಸರ್ಕಾರವೇ ಬೆಂಬಲ ಬೆಲೆ ನೀಡಿ ಖರೀದಿಸುವುದೇ; ಖರೀದಿಸುವುದಿದ್ದರೆ, ನೀಡುವ ಬೆಂಬಲ ಬೆಲೆ ಎಷ್ಟು? | ರೈತರ ಜಮೀನಿನಲ್ಲಿ ಬೆಳೆಸಿರುವ/ ಬೆಳೆದಿರುವ ಮರಗಳು ಸದರಿಯವರ ಖಾಸಗಿ ಆಸ್ತಿಯಾಗಿದ್ದು, ಹಾಳಾಗದ ಉತ್ಪನ್ನಗಳು (Non-perishable products) ಆಗಿರುವುದಿಲ್ಲ. ಮುಕ್ತ ಮಾರುಕಟ್ಟೆಯ ದರಗಳನ್ನು ಗಮನದಲ್ಲಿರಿಸಿ, ಮರಗಳನ್ನು ಮಾರಾಟ ಮಾಡಲು ರೈತರು ಸ್ವತಂತ್ರ್ಯರಾಗಿರುವುದರಿಂದ ಕೃಷಿ ಭೂಮಿಯಲ್ಲಿ ಬೆಳೆದ ಮರಗಳನ್ನು ಸರ್ಕಾರವೇ ಖರೀದಿಸಲು ಪ್ರಸ್ತುತ ಅವಶ್ಯಕತೆ ಇರುವುದಿಲ್ಲ. |

ಇ-ಸಂಖ್ಯೆ: ಅಪಜೀ 04 ಎಫ್‌ಟಿಎಸ್ 2026

(signature)

(ಈಶ್ವರ ಬಿ. ಖಂಡ್ರೆ)
ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು